ದಿಃ06.10.2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ತಕರಾರುದಾರ ನಂ 1 ಪರ ವಕೀಲರಾದ ಶ್ರೀ ಎಸ್.ಕೆ ಇವರಿಂದ ಮುಂದುವರೆದ ಪಾಟೀ ಸವಾಲುಃ

6. ಈ ಪ್ರಕರಣವನ್ನು ಸಲ್ಲಿಸುವುದಕ್ಕಿಂತ ಮುಂಚೆ ನಾನು ನನ್ನ ನ್ಯಾಯವಾದಿಗಳ ಮುಖಾಂತರ ಪ್ರಸ್ತುತ ತಕರಾರುದಾರನಾದ ನಂ 1 ಇತನಿಗೆ ನೋಟಿಸು ಕಳುಹಿಸಿಕೊಟ್ಟಿರುತ್ತೇನೆ ಆದರೆ ಅದರ ದಿನಾಂಕ ಹೇಳಲು ಬರುವುದಿಲ್ಲ. ಈ ಪ್ರಕರಣ ದಾಖಲು ಮಾಡುವುದಕ್ಕಿಂತ ಮುಂಚೆ ನಾನು ತಕರಾರುದಾರ ನಂ 1 ಜಾವೇದ್ ಇತನಿಗೆ ಯೂವುದೇ ನೋಟಿಸು ಕಳುಹಿಸದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಲ್ಲಿಸಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಆಸ್ತಿಗೆ ಸಂಬಂಧಿಸಿದ ತೀರ್ಪುಗಳಾದ ಬಗ್ಗೆ ಹೇಳಿ ಬರೆಸಿರುತ್ತೇನೆ. ನಾನು ಸಲ್ಲಿಸಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಕರಾರುದಾರರಾದ ನಂ 1 ಜಾವೇದ್ ಮತ್ತು 2 ಗಣೇಶ ಇವರಿಗೆ ಸಂಬಂಧಪಟ್ಟಂತೆ ಒಂದೇ ಪ್ರಮಾಣ ಪತ್ರದಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಅನ್ನುವುದು ಸುಳ್ಳು. ಅವರಿಬ್ಬರ ಕುರಿತು ಒಂದೇ ಪ್ರಮಾಣ ಪತ್ರದ ಮುಖಾಂತರ ಸಾಕ್ಷ್ಯ ನುಡಿಯಲು ಅರ್ಹಳಲ್ಲ ಮತ್ತು ಅವರಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕಾಗಿತ್ತು ಅಂದರೆ ಸುಳ್ಳು. ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಕರಾರುದಾರರಾದ ನಂ 1 ಜಾವೇದ್ ಮತ್ತು 2 ಗಣೇಶ ಇವರ ವಿರುದ್ದ ಬೇರೆ ಬೇರೆ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ನಾನು ಒಂದೇ ಪ್ರಮಾಣ ಪತ್ರದಲ್ಲಿ 2 ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸಾಕ್ಷ್ಯ ನುಡಿಯಲು ಅನರ್ಹಳು ಆದ್ದರಿಂದ ನಾನು ಸಲ್ಲಿಸಿದ ಸಾಕ್ಷಿ ಪ್ರಮಾಣ ಪತ್ರ ಊರ್ಜಿತವಾಗಲಾರದು ಮತ್ತು ಅದನ್ನು ತಿರಿಸ್ಕರಿಸಬೇಕಾಗುತ್ತದೆ ಅನ್ನುವುದು ಸರಿಯಲ್ಲ.

7. ತಕರಾರುದಾರರಾದ ಜಾವೇದ್ ಇತ ತನ್ನ ತಕರಾರು ಪತ್ರದಲ್ಲಿ ಬರೆದ ತಕರಾರಿನ ಕುರಿತು ನಾನು ನಮ್ಮ ನ್ಯಾಯವಾದಿಗಳ ಮುಖಾಂತರ ಕೇಳಿ ತಿಳಿದುಕೊಂಡಿರುತ್ತೇನೆ. ತಕರಾರುದಾರ ನಂ 1 ಜಾವೇದ್ ಇತ ತನ್ನ ತಕರಾರಿನಲ್ಲಿ ಹೇಳಿರುವ ವಿಷಯ ನನಗೆ ಹೇಳಲು ಬರುವುದಿಲ್ಲ. ಆತ ತನ್ನ ತಕರಾರಿನ ಜೊತೆ ದಾಖಲಾತಿಗಳನ್ನು ಹಾಜರು ಮಾಡಿರುತ್ತಾನೆ ಅನ್ನುವುದು ಸರಿಯಲ್ಲ. ನಿಪಿ-13 ರಿಂದ

ನಿಪಿ-36 ದಾಖಲಾತಿಗಳನ್ನು ತಕರಾರುದಾರ ನಂ 1 ಸಲ್ಲಿಸಿದ್ದು ಅವುಗಳ ಕುರಿತು ನಾನು ನಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೇನೆ.

8. ದಿ:28.03.1996 ರಂದು ನಿಪಿ-13ರ ಪ್ರಕಾರ ಅನಂತರಾಜ್ ಪಾಟೀಲ್ ಇತ ತಕರಾರುದಾರ ನಂ 1 ಜಾವೇದ್ ಇತನ ಹೆಸರಿನಲ್ಲಿ ಬರೆದುಕೊಟ್ಟಿರುವ ಕ್ರಯಪತ್ರ ನನಗೆ ಬಂಧನಕಾರಕ ಆಗುವುದಿಲ್ಲ ಅಂತ ಅದನ್ನು ಪ್ರಶ್ನಿಸಿ ಯಾವುದೇ ನ್ಯಾಯಾಲಯದಲ್ಲಿ ದಾವೆ ಹಾಕಿಲ್ಲ. ಅದನ್ನು ಪ್ರಶ್ನೆ ಮಾಡದ ಹೊರತು ಮತ್ತು ರದ್ದು ಪಡಿಸಿಕೊಳ್ಳದ ಹೊರತು ಈ ಪ್ರಕರಣದಲ್ಲಿ ನನಗೆ ಯಾವುದೇ ಪರಿಹಾರ ಕೇಳಲು ಬರುವುದಿಲ್ಲ ಅನ್ನುವುದು ಸರಿಯಲ್ಲ. ನಿಪಿ-14ರ ಪ್ರಕಾರ ಕಣ್ಣಾವರ ಬೀರಪ್ಪ, ತಿಮ್ಮಪ್ಪ, ನಾಗಪ್ಪ, ಬಸಪ್ಪ, ಮತ್ತು ಕೆಂಚಪ್ಪ ಇವರ ನಡುವೆ ಆದ ಆಗಿರುವ ಪಾಲು ವಿಭಾಗ ಪತ್ರವನ್ನು ರದ್ದು ಪಡಿಸಿಕೊಳ್ಳುವ ಸಲುವಾಗಿ ದಾವೆ ಹಾಕಿಲ್ಲ ಅಂದರೆ ಸರಿ. ನಿಪಿ-21ರ ಪ್ರಕಾರ ಅನಂತರಾಜ್ ಪಾಟೀಲ್ ಇವರು ಶ್ರೀ ಹರಿಹರೇಶ್ವರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಹರಿಹರ ಇವರಿಗೆ ಸಾಲ ತಿರುವಳಿ ಮಾಡಿದ ಹಿನ್ನೆಲೆಯಲ್ಲಿ ಮೇಲ್ಕಂಡ ದಾಖಲೆಯನ್ನು ಮಾಡಿಕೊಟ್ಟ ಕುರಿತು ನನಗೆ ಗೊತ್ತಿದೆ ಅಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ನಿಪಿ-27 ರಿಂದ 34 ಭಾವಚಿತ್ರಗಳಲ್ಲಿ ಕಾಣುವ ಮನೆ ಮತ್ತು ಲಗತ್ತಾಗಿರುವ ಖಾಲಿ ಜಾಗೆ ತಕರಾರುದಾರ ನಂ 1 ಎಮ್.ಜಿ. ಜಾವೇದ್ ಇತನಿಗೆ ಸಂಬಂಧಪಟ್ಟ ಆಸ್ತಿ ಅನ್ನುವುದು ಸರಿಯಲ್ಲ. ಆ ಸ್ವತ್ತು ಈ ಹೊತ್ತಿಗೂ ಸಹ ಆತನ ಸ್ವಾದೀನ ಅನುಭವದಲ್ಲಿದೆ ಅಂದರೆ ಸುಳ್ಳು.

9. ನಾನು ನನ್ನ ಅರ್ಜಿಯ ಜೊತೆ ಸಲ್ಲಿಸಿದ ದಾಖಲಾತಿಗಳ ಬಗ್ಗೆ ಗೊತ್ತು. ನಿ.ಆರ್-9 ಈ ದಾಖಲೆಯನ್ನು ನ್ಯಾಯಾಲಯದಿಂದ ಅಳತೆ ಮಾಡಿಸಿದ ಕುರಿತು ಸ್ಕೆಚ್ ಹಾಕಿರುವ ದಾಖಲೆ ಇರುತ್ತದೆ. ಅದನ್ನು 2002ನೇ ಇಸವಿಯಲ್ಲಿ ಸ್ಕೆಚ್ ಹಾಕಿ ಅಳತೆ ಮಾಡಿ ಕೊಟ್ಟಿರುತ್ತಾರೆ. ಸರ್ವೆಯರ್ ಜೊತೆ ನಾವು ಶ್ಯಾಮಿಲಾಗಿ ನಿ.ಆರ್-9 ಇದನ್ನು ಸುಳ್ಳು ತಯಾರಿಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ಸರ್ವೆಯರ್ ಇವರಿಗೆ ನ್ಯಾಯಾಲಯಕ್ಕೆ ಸುಳ್ಳು ವರದಿ ಸಲ್ಲಿಸುವಂತೆ ನಾನು ಪ್ರಚೋದನೆ ಮಾಡಿರುತ್ತೇನೆ ಅಂದರೆ ಸುಳ್ಳು. ಸರ್ವೆಯರ್ ಇವರು ದಾವಾ ಆಸ್ತಿಗೆ ಬೇಟಿ ನೀಡದೇ ತಮ್ಮ ಕಚೇರಿಯಲ್ಲಿಯೇ ಕುಳಿತುಕೊಂಡು ನನಗೆ ಅನುಕೂಲವಾಗುವ ರೀತಿಯಲ್ಲಿ ಸ್ಕೆಚ್ ಮತ್ತು ವರದಿ ತಯಾರಿಸಿ ಈ ಪ್ರಕರಣದಲ್ಲಿ ಸಲ್ಲಿಸಿರುತ್ತಾರೆ

ಅನ್ನುವುದು ಸರಿಯಲ್ಲ. ಸರ್ವೆಯರ್ ಇವರನ್ನು ಕರೆಯಿಸಿ ಈ ಪ್ರಕರಣದಲ್ಲಿ ಅವರನ್ನು ಪರೀಕ್ಷೆಗೆ ಒಳಪಡಿಸಬಲ್ಲೆ. ಪ್ರಕರಣದಲ್ಲಿ ನ್ಯಾಯಾಲಯದ ವತಿಯಿಂದ ಯಾವುದೇ ನೀಯೋಗ ದಾವಾ ಸ್ವತ್ತಿಗೆ ಬಂದಿಲ್ಲ ಮತ್ತು ಅದನ್ನು ಅಳತೆ ಮಾಡಿ ಅದರ ಪೈಕಿ ನಿರ್ಧಿಷವಾದ ಒಂದು ಭಾಗವನ್ನು ನನಗೆ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಭಾಗ ಬಂದಿದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಹೊತ್ತಿನವರೆಗೂ ಮನೆ ಮತ್ತು ಖುಲ್ಲಾ ಜಾಗೆ ಸಂಪೂರ್ಣವಾಗಿ ತಕರಾರುದಾರ ನಂ 1 ಜಾವೇದ ಇತನ ಸ್ವಾದೀನ ಅನುಭವದಲ್ಲಿದೆಯೇ ವಿನಃ ಅದರಲ್ಲಿ ಯಾವುದೇ ಒಂದು ಭಾಗ ನನ್ನ ಸ್ವಾದೀನ ಅನುಭದಲ್ಲಿಲ್ಲ ಅನ್ನುವುದು ಸರಿಯಲ್ಲ. ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಎಮ್.ಜಿ ಜಾವೇದ್ ಇತನ ಸ್ವತ್ತನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.